9

# ಸಹಕಾರಿಗಳ ನಿಬಂಧಕರ, ಕಛೇರಿ, ಕರ್ನಾಟಕ ರಾಜ್ಯ

**ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು – 560 052.**

ನಂ.:ಆರ್.ಎಸ್ಆರ್/ಸೌಕಾ/64/ಎಕ್ಸ್ಎಂಸಿ/2005–06 ದಿನಾಂಕ 17.6.2005

1. ಎಲ್ಲಾ ಪ್ರಾಂತೀಯ ಸಹಕಾರಿಗಳ ಸಂಯುಕ್ತ ನಿಬಂಧಕರಿಗೆ
2. ಎಲ್ಲಾ ಜಿಲ್ಲಾ ಸಹಕಾರಿಗಳ ಉಪನಿಬಂಧಕರಿಗೆ
3. ಎಲ್ಲಾ ಉಪ ವಿಭಾಗೀಯ ಸಹಾಯಕ ನಿಬಂಧಕರಿಗೆ

ಮಾನ್ಯರೇ,

**ವಿಷಯ:** ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ ಅಡಿಯ ಸಹಕಾರಿಗಳ ಉಪ ವಿಧಿಗಳ ತಿದ್ದುಪಡಿಗೆ ಆಗುತ್ತಿರುವ ವಿಳಂಬ ಮತ್ತು ಮಾರ್ಗದರ್ಶನ ನೀಡುವ ಕುರಿತು.

**ಉಲ್ಲೇಖ:** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇವರ ಮನವಿ ಸಂಖ್ಯೆ : 53:2005–06 ದಿ : 9.5.2005

ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ ಅಡಿಯ ಸಹಕಾರಿಗಳ ಉಪವಿಧಿ ತಿದ್ದುಪಡಿ ಪ್ರಕ್ರಿಯೆ ಅಧೀನ ಕಛೇರಿಗಳಲ್ಲಿ ತುಂಬಾ ವಿಳಂಬವಾಗುತ್ತಿದ್ದು. ಕೆಲವು ಜಿಲ್ಲೆಗಳಲ್ಲಿ ಸೆಪ್ಟಂಬರ್ 2004ರಲ್ಲಿ ಸಲ್ಲಿಸಿದ ಪ್ರಸ್ತಾವನೆಗಳಿಗೆ ಇನ್ನೂ ಅನುಮೋದನೆ ನೀಡದಿರುವುದನ್ನು ಸಹಕಾರಿಗಳು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಗಮನಕ್ಕೆ ತಂದಿರುವುದಾಗಿ ತಿಳಸಿ ಈ ಬಗ್ಗೆ ಕೆಲವೊಂದು ಅಂಶಗಳ ಬಗ್ಗೆ ಅಧೀನ ಕಛೇರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಉಲ್ಲೇಖದ ಪತ್ರದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು ಈ ಕಛೇರಿಯನ್ನು ಕೋರಿರುತ್ತಾರೆ. ಆದುದರಿಂದ ಈ ಕೆಳಕಂಡ ಸೂಚನೆ ನೀಡಲಾಗಿದೆ.

1. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಹಾಗು ನಿಯಮಗಳು 2004ರಲ್ಲಿ ಸಹಕಾರಿಗಳ ಉಪವಿಧಿ ತಿದ್ದುಪಡಿಗೆ ಯಾವುದೇ ನೋಂದಣಿ ಶುಲ್ಕ ಪಡೆಯುವ ಅವಕಾಶ ಇರುವುದಿಲ್ಲ. ಆದುದರಿಂದ ನೋಂದಣಿ ಶುಲ್ಕ ಸಂಗ್ರಹಿಸುವ ಅಗತ್ಯವಿಲ್ಲ.
2. ಕಲಂ 11 (4) ಅಡಿಯಲ್ಲಿ ಉಪವಿಧಿಗಳ ನೋಂದಣಿ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿದ್ದಲ್ಲಿ

ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿನಗಳ ಒಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಾಯಿಸಬೇಕು. ತಿದ್ದುಪಡಿಗಳು ನಿಯಾಮಾನುಸಾರ ಇಲ್ಲದಿದ್ದಲ್ಲಿ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಣಿ ಮಾಡಲು ತಿರಸ್ಕರಿಸತಕ್ಕದ್ದು. ಇಲ್ಲದಿದ್ದಲ್ಲಿ ತೊಂಬತ್ತು ದಿನಗಳ ನಂತರ ತಿದ್ದುಪಡಿಯನ್ನು ನೋಂದಾಯಿಸಲಾಗಿದೆ ಎಂದು ಭಾವಿಸುವ ಅವಕಾಶವಿರುತ್ತದೆ. ಆದುದರಿಂದ ಅಧಿಕಾರಿಗಳು 90 ದಿನಗಳೊಳಗಾಗಿ ನೋಂದಣಿಕೆ ಕ್ರಮವಿಡತಕ್ಕದ್ದು. ಕಲಂ 11 (6) ರಡಿ ತಿದ್ದುಪಡಿಗಳು ನೋಂದಾಯಿತವಾಗಿದೆ ಎಂದು ಭಾವಿಸಲಾದ ಉಪವಿಧಿಗಳಿಗೆ ಕಾಯ್ದೆ ಕಲಂ 11(5) ರಡಿ ಸಂಬಂಧಪಟ್ಟ ಪ್ರಾಧಿಕಾರ ಪ್ರಮಾಣಪತ್ರ ನೀಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ತಿದ್ದುಪಡಿಗಳ ಪ್ರಸ್ತಾವೆಯನ್ನು ತೊಂಬತ್ತು ದಿನಗಳೊಳಗೆ ನೊಂದಾಯಿಸುವ ಅಥವಾ ತಿರಸ್ಕರಿಸುವ ಆದೇಶ ಹೊರಡಿಸಲು ಸೂಚಿಸಿದೆ.

3. ಸಹಕಾರಿಗಳ ಕಾರ್ಯವ್ಯಾಪ್ತಿಗೆ ಅನುಗುಣವಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಅಧಿಕಾರ ಪ್ರತ್ಯಾಯೋಜಿಸಲ್ಪಟ್ಟಿದ್ದು. ತಮ್ಮ ತಮ್ಮ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಸಹಕಾರಿಗಳು ಉಪವಿಧಿಗಳ ನೋಂದಣಿಗೆ ಪ್ರಸ್ತಾವೆ ಸಲ್ಲಿಸಿದಾಗ ಅಧೀನ ಕಛೇರಿಗಳ ಮುಖಾಂತರ ಪ್ರಸ್ತಾವ ಸಲ್ಲಿಸುವಂತೆ ಸೂಚಿಸುವುದು ಸರಿಯಾದ ಕ್ರಮವಲ್ಲ. ನೋಂದಣಿ ಪ್ರಾಧಿಕಾರಿಗಳು ಪ್ರಸ್ತಾವೆಯನ್ನು ಸ್ವೀಕರಿಸಿದ ನಂತರ ನಿಯಮಾನುಸಾರ ನೋಂದಣಿಗೆ ಕ್ರಮವಿಡಬೇಕಾಗುತ್ತದೆ. ಅಗತ್ಯವಾದಲ್ಲಿ ಮಾತ್ರ ಅಧೀನ ಕಚೇರಿಗಳಿಂದ ವರದಿ ಪಡೆಯಬಹುದಾಗಿದೆ.

4. ಸಹಕಾರಿಗಳು ತಮ್ಮ ಹಾಲಿ ಇರುವ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಲು ಉಪವಿಧಿಗೆ ತಿದ್ದುಪಡಿ ಮಾಡಲು ಉದ್ದೇಶಿಸಿದಲ್ಲಿ ಕಾರ್ಯವ್ಯಾಪ್ತಿ ಹೆಚ್ಚಿಸುವ ತಿದ್ದುಪಡಿಗೆ ಪೂರ್ವದಲ್ಲಿ ಇದ್ದಂತಹ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿ, ಆ ಅಧಿಕಾರಿಗಳು ಕಾರ್ಯವ್ಯಾಪ್ತಿ ಹೆಚ್ಚಿಸುವ ಬಗ್ಗೆ ಮನವರಿಕೆ ಮಾಡಿಕೊಂಡು ತಮ್ಮ ಮೇಲಧಿಕಾರಿಗಳಿಗೆ ಪ್ರಸ್ತಾವೆಯನ್ನು ಶಿಫಾರಸು ಮಾಡಬೇಕು.

ಉಪವಿಧಿಗಳ ತಿದ್ದುಪಡಿಗಳ ಪ್ರಸ್ತಾವೆಯಲ್ಲಿ ಆಗುತ್ತಿರುವ ವಿಳಂಬವನ್ನು ಪರಿಗಣಿಸಿ, ಈ ಮೇಲಿನ ಸೂಚನೆ ನೀಡಾಗುತ್ತಿದ್ದು ಯಾವುದೇ ಆಕ್ಷೇಪಣೆಗಳಿಗೆ ಗೊಂದಲಗಳಿಗೆ ಅವಕಾಶ ನೀಡದಂತೆ ಸೂಚನೆ ನೀಡಲಾಗಿದೆ.

ಸಹಿ /–

**(ಸಹಕಾರಿಗಳ ನಿಬಂಧಕರು)**

ಕರ್ನಾಟಕ ರಾಜ್ಯ, ಬೆಂಗಳೂರು